# ಪತ್ರಿಕಾ ಪ್ರಕಟಣೆ

## ಅಂತರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ ಹಾಗೂ ಕಳ್ಳಸಾಗಾಣಿಗೆ ವಿರೋಧಿ ದಿನಾಚರಣೆ ಅಂಗವಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಅಮಾನತ್ತುಪಡಿಸಿಕೊಂಡಿದ್ದ 69 ಕೆ.ಜಿ. 410 ಗ್ರಾಂ ಗಾಂಜಾ ಗಿಡ ಮತ್ತು ಸೊಪ್ಪನ್ನು ನಾಶಪಡಿಸಿರುತ್ತದೆ.






ಬೆಂಗಳೂರು ಪ್ರಧಾನ ಕಛೇರಿ ಸಿಆರ್‌ಎಂ-06/27/2016 ದಿನಾಂಕ.29.10.2020 ಮತ್ತು ದಿನಾಂಕ.15.06.2021 ರ ಆದೇಶದಂತೆ ಜಿಲ್ಲಾ ಮಟ್ಟದ ಮಾದಕ ವಸ್ತುಗಳ ನಿಷ್ಕ್ರೀಯ ಸಮಿತಿ ರಚಿಸಿದ್ದು, ಅಂತರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ ಹಾಗೂ ಕಳ್ಳಸಾಗಾಣಿಗೆ ವಿರೋಧಿ ದಿನಾಚರಣೆ ಅಂಗವಾಗಿ ದಿನಾಂಕ.26.06.2021 ರಂದು ಚಿತ್ರದುರ್ಗ ಜಿಲ್ಲಾ ಪೊಲೀಸ್ ಕಛೇರಿ ದಾಸ್ತಾನು ಕೊಠಡಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಪೊಲೀಸ್ ಠಾಣೆಗಳಲ್ಲಿ ಎನ್.ಡಿ.ಪಿ.ಎಸ್. ಕಾಯ್ದೆಯಲ್ಲಿ ವರದಿಯಾದ 10 ಪ್ರಕರಣಗಳಲ್ಲಿ ಅಮಾನತ್ತುಪಡಿಸಿದ್ದ ಮಾದಕ ವಸ್ತುಗಳನ್ನು ನ್ಯಾಯಾಲಯದ ಆದೇಶದಂತೆ ನಾಶಪಡಿಸಲು ದಾಸ್ತಾನು ಮಾಡಿಟ್ಟಿದ್ದ ಒಟ್ಟು 69 ಕೆ.ಜಿ. 410 ಗ್ರಾಂ ಗಾಂಜಾ ಗಿಡ ಮತ್ತು ಸೊಪ್ಪನ್ನು ಚಿತ್ರದುರ್ಗ ತಾಲ್ಲೂಕು ದ್ಯಾಮವ್ವನಹಳ್ಳಿ ಸರ್ವೇ ನಂಬರ್ 456ಪಿ, ಚಿತ್ರದುರ್ಗ ಎಂ.ಎಸ್.ಡಬ್ಲು ಸೈಟ್ ವಿ.ವಿ.ಇಂಸಿನ್ ಸಲೋಶನ್ ಪ್ರೈ.ಲಿ. ನಲ್ಲಿನ ತ್ಯಾಜ್ಯ ವಸ್ತು ವಿಲೇವಾರಿ ಘಟಕದಲ್ಲಿರುವ ಬಯೋ ಮೆಡಿಕಲ್ ವೇಸ್ಟ್ ಮ್ಯಾನೇಜ್‌ಮೆಂಟ್ ಸಿಸ್ಟಮ್‌ನ ಮುಖ್ಯ ಶೆಡ್‌ನ ಇಂಸಿನೇಟರ್ ಛೇಂಬರ್‌ನಲ್ಲಿ ಪಂಚರ ಸಮಕ್ಷಮ ನಾಶಪಡಿಸಲಾಯಿತು.

ಸದರಿ ಸಮಯದಲ್ಲಿ ಶ್ರೀಮತಿ.ರಾಧಿಕಾ.ಜಿ, ಐ.ಪಿ.ಎಸ್. ಅಧ್ಯಕ್ಷರು, ಮಾದಕ ವಸ್ತುಗಳ ನಿಷ್ಕ್ರೀಯ ಸಮಿತಿ ಮತ್ತು ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ಜಿಲ್ಲೆ, ಹಾಗೂ ಮಾದಕ ವಸ್ತುಗಳ ನಿಷ್ಕ್ರೀಯ ಸಮಿತಿಯ ಸದಸ್ಯರುಗಳಾದ ಎನ್.ರಮೇಶ್, ಡಿ.ವೈ.ಎಸ್.ಪಿ. ಚಿತ್ರದುರ್ಗ ಮತ್ತು ರೋಷನ್ ಜಮೀರ್, ಡಿ.ವೈ.ಎಸ್.ಪಿ. ಹಿರಿಯೂರು ಉಪವಿಭಾಗ, ಪ್ರಕಾಶ್, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳ, ಪ್ರಾದೇಶಿಕ ಕಛೇರಿ, ಚಿತ್ರದುರ್ಗ ಹಾಗೂ ಪಂಚರಾದ ಬಸವರಾಜ್, ಕಿರಿಯ ಆರೋಗ್ಯ ನಿರೀಕ್ಷಕರು, ನಗರಸಭೆ ಮತ್ತು ಯೋಗೇಂದ್ರ, ಪ್ರ.ದ.ಸ. ನಗರಸಭೆ ಚಿತ್ರದುರ್ಗ ಇವರುಗಳು ಹಾಜರಿರುತ್ತಾರೆ.